# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಡಿಸೆಂಬರ್ 2025** ಬೆಂಗಳೂರು, ಸಂಪುಟ 11, ಸಂಚಿಕೆ 08 ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 December 2025**, Bengaluru, Vol. 11, Issue No.08 Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription : Annual Rs. 30; Life : Rs. 500/-
Published by: Karnataka Vipassana Prachara Samiti Trust.


## ಧಮ್ಮ ಪದಗಳು

| | |
|---|---|
| "ಅಕ್ಕೋಚ್ಛಿಮಂ, ಅವಧಿ ಮಂ,<br>ಅಜಿನಿ ಮಂ, ಅಹಾಸಿ ಮೇ<br>ಯೇ ಚ ತಂ ನುಪನಯ್ಹಂತಿ,<br>ವೇರಂ ತೇನೂಪಸಮ್ಮತಿ. | ಅವನು ನನ್ನನ್ನು ಬೈದ, ಅವನು ನನ್ನನ್ನು ಹೊಡೆದ, ಅವನು ನನ್ನನ್ನು ಸೋಲಿಸಿದ, ಅವನು ನನ್ನಲ್ಲಿದ್ದುದನ್ನು ಕಿತ್ತುಕೊಂಡ ಎಂದು ಯಾರು ಚಿಂತಿಸುವುದಿಲ್ಲವೋ ಅಂಥವರ ಹಗೆತನವು ಉಪಶಮನವಾಗುತ್ತದೆ |

ಧಮ್ಮಪದ–4, ಜೋಡಿ ವರ್ಗ

# "ಸಯಾಜಿಯವರ ಧರ್ಮ ಧ್ಯೇಯ ಸಫಲವಾಗಲಿ"

**ಆಚಾರ್ಯ ಶ್ರೀ ಎಸ್.ಎನ್. ಗೋಯಂಕ (1924–2013)**

ಶತಮಾನೋತ್ಸವ ವಿಚಾರ ಸಂಕಿರಣ: ಧಮ್ಮ ಜ್ಯೋತಿ, ಬರ್ಮಾ ಜನವರಿ 9, 2000 ಉದ್ಘಾಟನಾ ಭಾಷಣ
('ಫಾರ್ ದ ಬೆನಿಫಿಟ್ ಆಫ್ ಮೆನಿ' ಪುಸ್ತಕದಿಂದ ಅನುವಾದಿಸಲಾಗಿದೆ).

ನಮೋ ತಸ್ಸ ಭಗವತೋ ಅರಹತೋ ಸಮ್ಮಾ ಸಂಬುದ್ಧಸ್ಸ

ನನ್ನ ನೆಚ್ಚಿನ ಧಮ್ಮಪುತ್ರರೇ, ಧಮ್ಮ ಪುತ್ರಿಯರೇ ಹಾಗೂ ಧಮ್ಮ ಸಹೋದರ–ಸಹೋದರಿಯರೇ,

ಸಯಾಜಿ ಉ ಬಾ ಖಿನ್‌ರವರಿಗೆ ನಮ್ಮ ಕೃತಜ್ಞತೆ ಮತ್ತು ಸಮರ್ಪಣೆಯ ಭಾವವನ್ನು ವ್ಯಕ್ತಪಡಿಸುವುದಕ್ಕಾಗಿ ಈ ದಿನ ಮಧ್ಯಾಹ್ನ ನಾವೆಲ್ಲರೂ ಈ ಪವಿತ್ರ ಸ್ಥಳದಲ್ಲಿ ಸೇರಿದ್ದೇವೆ. ನಿಮ್ಮಲ್ಲಿ ಅನೇಕರು ಬಹಳ ದೂರದ ಪ್ರದೇಶಗಳಿಂದ, ಸರಿಸುಮಾರು ಮೂವತ್ತು ಬೇರೆ ಬೇರೆ ದೇಶಗಳಿಂದ ಬಂದಿರುವಿರಿ ಮತ್ತು ಪರಿಯತ್ತಿ ಹಾಗೂ ಪಟಿಪತ್ತಿ (ಸಿದ್ಧಾಂತ ಮತ್ತು ಆಚರಣೆ) ಇವೆರಡನ್ನೂ ಪರಿಶುದ್ಧ ರೂಪದಲ್ಲಿ ಉಳಿಸಿಕೊಂಡು ಬಂದಿರುವ ಈ ಧರ್ಮಭೂಮಿಗೆ ಭೇಟಿ ಕೊಡುವ ಅವಕಾಶ ದೊರೆತಿರುವುದು ನಮ್ಮೆಲ್ಲರ ಸೌಭಾಗ್ಯವೇ ಸರಿ. ಇದು ಈ ಪವಿತ್ರ ಭೂಮಿಗೆ ನಾವೆಲ್ಲರೂ ಕೈಗೊಂಡಿರುವ ತೀರ್ಥಯಾತ್ರೆ.

ಎಲ್ಲದಕ್ಕೂ ಮೊದಲು ಸಮ್ಮಾಸಂಬುದ್ಧರಾದ ಭಗವಾನ್ ಗೌತಮಬುದ್ಧರಿಗೆ ನಮ್ಮ ಆಳವಾದ ಕೃತಜ್ಞತೆ ಮತ್ತು ಸಮರ್ಪಣೆಯ ಭಾವವನ್ನು ವ್ಯಕ್ತಪಡಿಸೋಣ. ಸುಮೇಧ ಎಂಬ ಹೆಸರಿನ ಬ್ರಾಹ್ಮಣ ವಿರಕ್ತ ತಪಸ್ವಿಯಾಗಿದ್ದ ಅವರು ಆಗಿನ ಸಮ್ಮಾಸಂಬುದ್ಧರಾದ ದೀಪಂಕರ ಬುದ್ಧರ ಸಂಪರ್ಕಕ್ಕೆ ಬರುತ್ತಾರೆ. ಒಂದು ವೇಳೆ ಬುದ್ಧನಿಂದ ವಿಪಶ್ಯನ ವಿದ್ಯೆಯನ್ನೇನಾದರೂ ಕಲಿತಿದ್ದರೆ ಸುಲಭವಾಗಿ ಅರಹಂತನಾಗಲು ಸಾಧ್ಯವಾಗುವಷ್ಟು ಪುಣ್ಯ ಪಾರಮಿಗಳು ಆತನಲ್ಲಿತ್ತು. ಮುಕ್ತಿ ತನ್ನ ಕೈಯಲ್ಲಿಯೇ ಇದ್ದರೂ ಅದನ್ನು ತ್ಯಾಗ ಮಾಡಿ. "ನನಗೆ ಕೇವಲ ನನ್ನ ಮುಕ್ತಿಯನ್ನು ಮಾತ್ರ ಸಾಧಿಸಿಕೊಳ್ಳುವ ಬಯಕೆಯಿಲ್ಲ. ನಾನು ನಿಮ್ಮಂತೆಯೇ ಸಮ್ಮಾಸಂಬುದ್ಧನಾಗಿ, ಅಸಂಖ್ಯಾತ ಜೀವಿಗಳಿಗೆ ದುಃಖಸಾಗರದಿಂದ ಹೊರಬರಲು ನೆರವಾಗಬೇಕೆಂದು ಬಯಸುತ್ತೇನೆ" ಎಂದು ಹೇಳುತ್ತಾನೆ. ಸಮ್ಮಾಸಂಬುದ್ಧನಾಗಲು ಲೆಕ್ಕವಿಲ್ಲದಷ್ಟು ಯುಗಗಳೇ ಬೇಕಾಗುವುದು ಮತ್ತು ಅದಕ್ಕಾಗಿ ಬೇಕಾಗುವ ಪಾರಮಿಗಳನ್ನು ಸಂಗ್ರಹಿಸುತ್ತ ಅಪಾರ ಸಂಕಷ್ಟಕ್ಕೆ ಈಡಾಗುವೆನೆನ್ನುವುದು ಸುಮೇಧನಿಗೆ ಸ್ಪಷ್ಟವಾಗಿ ತಿಳಿದಿತ್ತು. ಆದರೂ ಅದೆಂತಹ ಮಹಾನ್ ತ್ಯಾಗ! ಅದೆಂತಹ ಮಹಾನ್ ಕಾರುಣ್ಯ! ಒಂದು ವೇಳೆ ಆಗಲೇ ಸುಮೇಧ ಅರಹಂತ ಅವಸ್ಥೆಯನ್ನು ಪಡೆದು ಮುಕ್ತನಾಗಿದ್ದರೆ ಅಥವಾ ನಂತರದಲ್ಲೇನಾದರೂ ಪಚ್ಚೇಕ–ಬುದ್ಧ (ಮೌನವಾಗಿರುವ ಬುದ್ಧ)ನಾಗಿ ಮುಕ್ತಿ ಪಡೆದಿದ್ದರೆ, ಈ ಅದ್ಭುತವಾದ ಧರ್ಮ (ಧಮ್ಮ)ವನ್ನು ಪಡೆಯುವುದು ನಮಗೆ ಸಾಧ್ಯವಾಗುತ್ತಿತ್ತೇ?

ಸಮ್ಮಾಸಂಬುದ್ಧರಾದ ಬಳಿಕ ತಮ್ಮ ಜೀವನದ ಉಳಿದ ನಲವತ್ತೈದು ವರ್ಷಗಳ ಕಾಲ ಮಮತೆ ಮತ್ತು ಅನುಕಂಪದಿಂದ ಜನಸೇವೆಯಲ್ಲಿ ತೊಡಗುತ್ತಾರೆ. ಅವರಿಂದ ತರಬೇತಿ ಹೊಂದಿದ ಅರಹಂತರು ಸಹ ಅನಂತ ಕರುಣಾಭಾವದಿಂದ ದೇಶದಾದ್ಯಂತ ಮತ್ತು ದೇಶದ ಗಡಿಯಾಚೆಯೂ ಜನಸೇವೆಯಲ್ಲಿ ನಿರತರಾಗುತ್ತಾರೆ. ಅವರ ನಂತರವೂ ಗುರು–ಶಿಷ್ಯ ಪರಂಪರೆಯ ಮೂಲಕ ಧರ್ಮ ಗಂಗೆಯು ತನ್ನ ಪರಿಶುದ್ಧ ರೂಪದಲ್ಲಿ ಹರಿಯುತ್ತಲೇ ಉಳಿಯಿತು. ಶುದ್ಧಧರ್ಮವನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದ ಆ ಎಲ್ಲ ಸಂತ–ಮಹಾತ್ಮರಿಗೂ ನಾವು ಅತ್ಯಂತ ಕೃತಜ್ಞರಾಗಿದ್ದೇವೆ ಮತ್ತು ಅವರಲ್ಲಿ ನಮ್ಮ ಸಮರ್ಪಣಾ ಭಾವವನ್ನು ವ್ಯಕ್ತಪಡಿಸುತ್ತೇವೆ.

ದುರದೃಷ್ಟವಶಾತ್ ಭಾರತದಲ್ಲಿ ಕೇವಲ ಐದುನೂರು ವರ್ಷಗಳು ಮಾತ್ರ ಧರ್ಮವು ತನ್ನ ಪರಿಶುದ್ಧ ಸ್ವರೂಪದಲ್ಲಿ ಉಳಿಯಿತು. ಅದರ ಪರಿಶುದ್ಧತೆ ಕಳೆದುಹೋಗುವ ಮೊದಲು ದೇಶದ ಗಡಿಯಾಚೆಗೆ ಕಳುಹಿಸದೇ ಹೋಗಿದ್ದರೆ, ಧರ್ಮ ಸಂಪೂರ್ಣವಾಗಿ ಕಣ್ಮರೆಯಾಗುತ್ತಿತ್ತು. ಅದಕ್ಕಾಗಿ ನಾವು ಈ ಸುಂದರವಾದ ನಾಡು, ಬರ್ಮಾಕ್ಕೆ ಕೃತಜ್ಞರಾಗಿದ್ದೇವೆ. ಅಂದಿನ ದಿನಗಳಲ್ಲಿ ಇದು ಸುವರ್ಣಭೂಮಿ (ಬಂಗಾರದ ನಾಡು) ಎಂದು ಕರೆಯಲ್ಪಡುತ್ತಿತ್ತು. ಧರ್ಮ ಇಲ್ಲಿ ಬಂದು ನೆಲೆಸಿದ ನಂತರ ಈ ಭೂಮಿ ಇನ್ನೂ ಅದ್ಭುತವಾಯಿತು.

ಜ್ಞಾನೋದಯವಾದ ನಂತರ ಬುದ್ಧರಿಗೆ ಮೊಟ್ಟ ಮೊದಲು ಆಹಾರ ಅರ್ಪಿಸಿದ ಬರ್ಮಾದ ಗೃಹಸ್ಥ ಸಹೋದರರಾದ ತಪಸ್ಸು ಮತ್ತು ಭಲ್ಲುಕ ಇವರಿಗೂ ನಾವು ಕೃತಜ್ಞರಾಗಿದ್ದೇವೆ. ಅವರು ಭಗವಾನ್ ಬುದ್ಧರನ್ನು ಕೋರಿ ಅವರ ಕೆಲವು ತಲೆಕೂದಲ ಎಳೆಗಳನ್ನು ಕುರುಹಾಗಿ ಬರ್ಮಾಗೆ ತರುತ್ತಾರೆ. ಅವುಗಳನ್ನು ಐತಿಹಾಸಿಕ ಶ್ವೇಡಾಗೋನ್ ಪಗೋಡಾದಲ್ಲಿ ಪ್ರತಿಷ್ಠಾಪಿಸಲಾಗಿದೆ. ಭಗವಾನ್ ಬುದ್ಧರ ಅವಶೇಷಗಳನ್ನು ಹೊಂದಿರುವ ಶ್ವೇಡಾಗೋನ್ ಪಗೋಡಾದ ಅದ್ಭುತವಾದ ತರಂಗಗಳು ಈ ನಾಡಿಗೆ ನೆರವಾಗುವುದಷ್ಟೇ ಅಲ್ಲ ಇಡೀ ಮಾನವಕುಲಕ್ಕೇ ಸಹಾಯ ಮಾಡುತ್ತವೆ. ಇಲ್ಲಿಗೆ ಬಂದು ಪುಷ್ಪ ಇತ್ಯಾದಿಗಳನ್ನು ಅರ್ಪಿಸಿ ಗೌರವ ಸಲ್ಲಿಸುವವರು ಈ ತರಂಗಗಳಿಂದ ಲಾಭದೊರೆತು ಧರ್ಮಮಾರ್ಗದಲ್ಲಿ ಮುನ್ನಡೆಯುವ ಪ್ರೇರಣೆ ಪಡೆಯುತ್ತಾರೆ ಹಾಗೂ ತಮ್ಮ ಭಕ್ತಿಯಿಂದಾಗಿ ಪುಣ್ಯ ಸಂಪಾದಿಸುತ್ತಾರೆ: ಆದರೆ ಇಲ್ಲಿ ಧ್ಯಾನಸಾಧನೆ ಮಾಡುವವರು ಸಂಪಾದಿಸುವ ಪುಣ್ಯವು ಅಪರಿಮಿತವಾದುದು. ಈಗ ನೂರಾರು ಸಂಖ್ಯೆಯಲ್ಲಿ ನೀವು ಈ ಪವಿತ್ರ ಭೂಮಿಯ ಯಾತ್ರೆಗೆ ಬಂದಿದ್ದೀರಿ. ಮತ್ತು ಶ್ವೇಡಾಗೋನ್ ಪಗೋಡಾದ ಆವರಣದಲ್ಲಿ ನೀವೆಲ್ಲರೂ ಧ್ಯಾನಸಾಧನೆ ಮಾಡಿ ಅದು ಎಂತಹ ಅದ್ಭುತವಾದ ಪಾವನ ಸ್ಥಳ ಎನ್ನುವುದನ್ನು ಅರಿಯುತ್ತೀರಿ.

ಆದ್ದರಿಂದ ಈ ದಿನ ನಾವು ಭಗವಾನ್ ಬುದ್ಧರ ಕುರುಹುಗಳನ್ನು ಇಲ್ಲಿಗೆ ತಂದು ನಂತರ ಭಾರತಕ್ಕೆ ಮರಳಿ ಬುದ್ಧರಿಂದ ಧರ್ಮವನ್ನು

ಕಲಿತು ಅದನ್ನೂ ಸಹ ಈ ನಾಡಿಗೆ ತಂದಂತಹ ತಪಸ್ಸು ಮತ್ತು ಭಲ್ಲುಕ ಇವರಿಗೆ ನಮ್ಮ ಕೃತಜ್ಞತೆ ವ್ಯಕ್ತಪಡಿಸುತ್ತೇವೆ.ನಂತರ ನಾವು ಅರಹಂತ ಗವಂಪತಿ ಅವರನ್ನು ಸ್ಮರಿಸುತ್ತೇವೆ. ಇವರು ಬುದ್ಧರ ಮಹಾಪರಿನಿರ್ವಾಣದ ಕೇವಲ ಏಳು ವರ್ಷಗಳ ಬಳಿಕ ರಾಜ ಸೀಹಾ(ಅಥವಾ ಸಿಂಘರಾಜ) ಅವರನ್ನು ಭೇಟಿ ಮಾಡಲು ಈ ದೇಶಕ್ಕೆ ಬರುತ್ತಾರೆ. ಈ ರಾಜ ಇಡೀ ಸುವರ್ಣ ಭೂಮಿಯನ್ನು ಆಳುತ್ತಿದ್ದ. ಆಗಿನ ಕಾಲದಲ್ಲಿ ಇದು ಈಗಿನ ಬರ್ಮಾಕ್ಕಷ್ಟೇ ಸೀಮಿತವಾಗಿರಲಿಲ್ಲ. ಥೈಲ್ಯಾಂಡಿನ ಹೆಚ್ಚಿನ ಭಾಗ, ಇಡೀ ಮಲೇಶಿಯಾ ದ್ವೀಪ ಮತ್ತು ಸಿಂಗಾಪುರ ದೇಶವನ್ನೂ ಒಳಗೊಂಡಿತ್ತು. ಆದರೆ ನಾವು ಸಿಂಘರಾಜನನ್ನು ನೆನೆಯುವುದು ಅವನ ರಾಜಕೀಯ ಸಾಮರ್ಥ್ಯಕ್ಕಾಗಿ ಅಲ್ಲ. ಗವಂಪತಿಯವರ ಸಹಾಯದಿಂದ ತನ್ನ ದೇಶದಾದ್ಯಂತ ಧರ್ಮವನ್ನು ಹರಡಿದ್ದಕ್ಕಾಗಿ.

ಅದಾದ ನೂರಿನ್ನೂರು ವರ್ಷಗಳ ಬಳಿಕ ತನ್ನ ಆಚಾರ್ಯರಾದ ಅರಹಂತ ಮೊಗ್ಗಲಿಪುತ್ತತಿಸ್ಸರಿಂದ ಪ್ರೇರಿತನಾದ ಮಹಾನ್ ಚಕ್ರವರ್ತಿ ಅಶೋಕ ಭಾರತದ ಗಡಿಯಾಚೆಯೂ ಧರ್ಮದೂತರನ್ನು ಕಳುಹಿಸಲು ನಿರ್ಧರಿಸುತ್ತಾನೆ. ಅದರ ಭಾಗವಾಗಿ ಅರಹಂತರಾದ ಸೋನ ಮತ್ತು ಉತ್ತರ ಈ ಪ್ರದೇಶಕ್ಕೆ ಬರುತ್ತಾರೆ. ಅವರು ಇಲ್ಲಿ ನೀಡಿದ ಮೊಟ್ಟ ಮೊದಲ ಉಪದೇಶ ಬ್ರಹ್ಮಜಾಲ ಸೂತ್ರ (ಸುತ್ತ). ಇದು ಸಾಮಾನ್ಯ ಉಪದೇಶವಾಗಿರಲಿಲ್ಲ. ಪ್ರಪಂಚದ ಈ ಭಾಗದ ಜನರಿಗೆ ಆಗ ಬುದ್ಧರ ಬೋಧನೆಗಳ ಬಗ್ಗೆ ಆಳವಾದ ಅರಿವು ಇಲ್ಲದಿದ್ದರೂ ಸಾಕಷ್ಟುಮಟ್ಟಿಗೆ ಅವು ಪರಿಚಿತವಾಗಿದ್ದವು ಎನ್ನುವುದು ಇದರಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಇಲ್ಲಿಯ ಜನರಿಗೆ ಅವರು ಧಮ್ಮದಲ್ಲಿ ಸ್ಥಾಪಿತವಾಗಲು ಸಹಾಯ ಮಾಡುವ ದೃಷ್ಟಿಯಿಂದ ಈ ಅದ್ಭುತವಾದ ಸೂತ್ರವನ್ನು ಬೋಧಿಸಲಾಯಿತು. ಬಹುಶಃ ಸ್ಥಳೀಯರು ಹೊಂದಿದ್ದ ಅನೇಕ ತಪ್ಪು ಅಭಿಪ್ರಾಯಗಳನ್ನು ಇದು ನಿವಾರಿಸುತ್ತದೆ. ಕೇವಲ ಪರಿಯತ್ತಿ ಅಷ್ಟೇ ಅಲ್ಲದೇ ಪಟಿಪತ್ತಿಯ ಮೇಲೂ ಈ ಸೂತ್ರ ಬೆಳಕು ಚೆಲ್ಲುತ್ತದೆ. ಎಲ್ಲ ರೀತಿಯ ಸಿದ್ಧಾಂತದ ನಂಬಿಕೆಗಳು ಈ ಮನಸ್ಸು ಮತ್ತು ಭೌತಿಕ ಶರೀರದ ವ್ಯಾಪ್ತಿಯ ಕ್ಷೇತ್ರದಲ್ಲಿಯೇ ಉತ್ಪತ್ತಿಯಾಗಿ ಅನುಭವಕ್ಕೆ ಬರುತ್ತವೆ ಎಂದು ಇದು ಹೇಳುತ್ತದೆ. ಆದರೆ ವಿಪಶ್ಯನವು ನಿಮ್ಮನ್ನು ಮನಸ್ಸು ಮತ್ತು ಶರೀರದಿಂದ ಆಚೆಗಿನ ಹಂತಕ್ಕೆ ಕೊಂಡೊಯ್ಯುತ್ತದೆ. ಅಲ್ಲಿ 'ವೇದನಾ' (ಸಂವೇದನೆ) ಮತ್ತು 'ತಣ್ಹಾ' (ತೃಷ್ಣೆ) ಇರುವುದಿಲ್ಲ. ಪರಿಯತ್ತಿ ಹಾಗೂ ಪಟಿಪತ್ತಿ ಇವೆರಡನ್ನೂ ಈ ನೆಲದಲ್ಲಿ ನೆಲೆಸುವಂತೆ ಮಾಡಿದುದಕ್ಕಾಗಿ ಅರಹಂತರಾದ ಸೋನ ಮತ್ತು ಉತ್ತರ ಇವರಿಗೂ ನಾವು ನಮ್ಮ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸೋಣ.

ಸೋನ ಮತ್ತು ಉತ್ತರ ಇವರ ನಂತರ ಇಲ್ಲಿ ಬೋಧನೆ ಮಾಡಿದ ಎಲ್ಲಾ ಆಚಾರ್ಯರುಗಳ ಹೆಸರು ನಮಗೆ ದೊರೆತಿಲ್ಲ. ಆದರೆ ಅವರಲ್ಲಿ ಒಬ್ಬರ ಹೆಸರು ಬಹಳ ಉಜ್ವಲವಾಗಿ ನಮ್ಮ ಮುಂದೆ ಹೊಳೆಯುತ್ತದೆ.ಅವರೇ ಅರಹಂತ ಧಮ್ಮದಸ್ಸಿ. ಸುಮಾರು ಎಂಟು ನೂರು ವರ್ಷಗಳ ಹಿಂದೆ ಬಾಳಿ ಬದುಕಿದ್ದ ಇವರು ಆಶಿನ್ ಅರಹನ್ ಎಂದೇ ಹೆಸರುವಾಸಿಯಾಗಿದ್ದರು. ಎಲ್ಲ ಪ್ರಕಾರದ ಅಭಿಜ್ಞೆಗಳ (ಅತೀಂದ್ರೀಯ ಶಕ್ತಿಗಳ) ಒಡೆಯರಾಗಿದ್ದ ಅವರಿಗೆ ಬರ್ಮಾದ ಉತ್ತರಭಾಗದಲ್ಲಿ ಶುದ್ಧಧರ್ಮ ಕುಸಿಯುವ ಅಪಾಯ ಗೋಚರಿಸುತ್ತದೆ. ಆಗ ಉತ್ತರದಲ್ಲಿ ಧಮ್ಮ ಬೋಧಕರನ್ನು 'ಅರಿ' ಎಂದು ಕರೆಯಲಾಗುತ್ತಿತ್ತು. ಅದು ಅವರು ತಮ್ಮನ್ನು ತಾವೇ 'ಅರಿಯಾ' ಅಥವಾ ಶ್ರೇಷ್ಠರೆಂದು ಪ್ರತಿಪಾದಿಸುವ ಸಂಕೇತವಾಗಿತ್ತು. ಆದರೆ ನಿಜವಾಗಿ ಹೇಳಬೇಕೆಂದರೆ ಅವರು ಶುದ್ಧಧರ್ಮದ ಶತ್ರು ಎಂಬರ್ಥದಲ್ಲಿ ಅರಿಗಳಾಗಿದ್ದರು. ಏಕೆಂದರೆ ಧರ್ಮದ ಪರಿಶುದ್ಧತೆಯನ್ನು ಅವರು ಹಾಳು ಮಾಡಿದ್ದರು. ಉತ್ತರ ಭಾಗದಲ್ಲಿ ಆಗ ಅನೋರತ (ಅಥವಾ ಅನುರುದ್ಧ) ಎಂಬ ಹೆಸರಿನ ಶಕ್ತಿಶಾಲಿ ಅರಸ ಆಳ್ವಿಕೆ ಮಾಡುತ್ತಿದ್ದ. ಅದೇ ಸಮಯದಲ್ಲಿ ಬರ್ಮಾದ ದಕ್ಷಿಣದಲ್ಲಿ ಮನೋಹರಿ (ಅಥವಾ ಮನ್ನುವಾ) ಎನ್ನುವ ಹೆಸರಿನ ದುರ್ಬಲ ಅರಸ ಆಳುತ್ತಿದ್ದ. ಶಕ್ತಿಶಾಲಿಯಾದ ರಾಜನಿಂದಲೇ ಧರ್ಮಕ್ಕೆ ವಿಪತ್ತು ಎಂಬುದನ್ನು ಧಮ್ಮದಸ್ಸಿಯವರು ಮನಗಂಡರು. ಏಕೆಂದರೆ ಒಬ್ಬ ಬಲಶಾಲಿ ಅರಸನು ಧರ್ಮ ವಿರೋಧಿ ಯಾದರೆ, ಅವನು ಧರ್ಮವನ್ನು ಬರ್ಮಾದಿಂದ ಸಂಪೂರ್ಣವಾಗಿ ನಾಶ ಮಾಡುವ ಸಾಮರ್ಥ್ಯ ಹೊಂದಿರುತ್ತಾನೆ. ಧರ್ಮವನ್ನು ಅದರ ಪರಿಶುದ್ಧ ರೂಪದಲ್ಲಿ ಉಳಿಸಿಕೊಳ್ಳುವುದನ್ನು ಸಾಧ್ಯವಾಗಿಸುವ ಸಲುವಾಗಿ ಧಮ್ಮದಸ್ಸಿ ಬರ್ಮಾದ ಉತ್ತರಭಾಗಕ್ಕೆ ಪ್ರಯಾಣ ಬೆಳೆಸುತ್ತಾರೆ. ಅಲ್ಲಿ ಅವರು ರಾಜ ಅನೋರತನಿಗೆ ತ್ರಿಪಿಟಕದಲ್ಲಿ ಬೋಧಿಸಿದ ಎಲ್ಲ ಬೋಧನೆಗಳನ್ನು (ಪರಿಯತ್ತಿ ಮತ್ತು ಪಟಿಪತ್ತಿ ಇವೆರಡನ್ನೂ ಸೇರಿಸಿ) ಪರಿಶುದ್ಧ ಸ್ವರೂಪದಲ್ಲಿ ಉಳಿಸಿಕೊಳ್ಳುವ ಮಹತ್ವವನ್ನು ಮನಗಾಣಿಸುತ್ತಾರೆ. ಅವುಗಳ ರಕ್ಷಣೆಗಾಗಿ, ತ್ರಿಪಿಟಕಗಳನ್ನು ಪಾಗಾನ್ (ಆಗಿನ ಹೆಸರು ಅರಿಮತ್ತನಪುರ– ಅಂದರೆ ಶತ್ರುಗಳನ್ನು ನಾಶ ಮಾಡಿದ ಊರು) ನಗರಕ್ಕೆ ತೆಗೆದುಕೊಂಡು ಹೋಗಿ ಸಂರಕ್ಷಿಸಲಾಯಿತು. ಇದಕ್ಕಾಗಿ ನಾವೆಲ್ಲರೂ ನಮ್ಮ ಆಳವಾದ ಕೃತಜ್ಞತೆಗಳನ್ನು ಅರಹಂತ ಧಮ್ಮದಸ್ಸಿ ಅವರಿಗೆ ಸಲ್ಲಿಸೋಣ.

ಧಮ್ಮದಸ್ಸಿಯವರು ಹಲವಾರು ವರ್ಷ ಆ ಭಾಗದಲ್ಲಿ ನೆಲೆಸಿ, ಅಲ್ಲಿ ಧರ್ಮ ಬಲವಾಗಿ ಬೇರೂರುವಂತೆ ಮಾಡುತ್ತಾರೆ. ನಂತರ ಅವರು ಇನ್ನೂ ಉತ್ತರಕ್ಕೆ ಪ್ರಯಾಣಿಸಿ ಸಗೈಂಗ್ ಗುಡ್ಡಗಳ ಪ್ರದೇಶದಲ್ಲಿ ನೆಲೆಸಿದರೆಂದು ಹೇಳುತ್ತಾರೆ. ಅಲ್ಲಿ ಅವರು ತಮ್ಮ ಉಳಿದ ಜೀವನವನ್ನು ಧ್ಯಾನಸಾಧನೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಅಲ್ಲದೇ ಪಟಿಪತ್ತಿಯನ್ನು (ಧಮ್ಮದ ಪ್ರಾಯೋಗಿಕ ಭಾಗ) ಕಲಿಯಬಯಸಿದ ಅನೇಕರಿಗೆ ಧ್ಯಾನ ಸಾಧನೆಯನ್ನು ಹೇಳಿಕೊಡುತ್ತಾರೆ. ಆದ್ದರಿಂದ ಸಗೈಂಗ್ ಸಹ ಧಮ್ಮದ ಮತ್ತೊಂದು ಪುಣ್ಯಕ್ಷೇತ್ರವಾಗಿದೆ.

ಆನಂತರ ಆಗಿಹೋದ ಆಚಾರ್ಯರುಗಳ ಹೆಸರುಗಳು ನಮಗೆ ಲಭ್ಯವಿಲ್ಲ. ಆದರೆ ಪೀಳಿಗೆಯಿಂದ ಪೀಳಿಗೆಗೆ, ಗುರು–ಶಿಷ್ಯ ಪರಂಪರೆಯ ಮೂಲಕ ಆ ಪ್ರದೇಶದಲ್ಲಿ ಧರ್ಮವನ್ನು ಪರಿಶುದ್ಧ ರೂಪದಲ್ಲಿ ಉಳಿಸಿಕೊಂಡು ಬರಲಾಯಿತು.

ಈಗ ಸುಮಾರು ನೂರೈವತ್ತು ವರ್ಷಗಳ ಹಿಂದೆ ಪರಿಯತ್ತಿ ಮತ್ತು ಪಟಿಪತ್ತಿ ಇವೆರಡರಲ್ಲೂ ನಿಷ್ಣಾತರಾದ ಅತ್ಯಂತ ಪ್ರತಿಭಾಶಾಲಿಯಾದ ಆಚಾರ್ಯ ಲೇಡಿ ಸಯಾದೋ ಅವರು ಧ್ಯಾನ ಸಾಧನೆಯನ್ನು ಹೇಳಿ ಕೊಡುತ್ತಿದ್ದರು. ದೂರದೃಷ್ಟಿಯ ಈ ಭಿಕ್ಷು ಸಂನ್ಯಾಸಿಗೆ ನಾವು ನಮ್ಮ ಅನಂತ ಕೃತಜ್ಞತೆಗಳನ್ನು ವ್ಯಕ್ತಪಡಿಸುತ್ತೇವೆ. ಬುದ್ಧರ ಪರಿನಿರ್ವಾಣವಾಗಿ ಎರಡೂವರೆ ಸಾವಿರ ವರ್ಷಗಳ ನಂತರ ದ್ವಿತೀಯ ಶಾಸನಕಾಲ ಪ್ರಾರಂಭವಾಗುತ್ತದೆ ಮತ್ತು ಆಗ ಧರ್ಮ ಪ್ರಪಂಚದಾದ್ಯಂತ ಹರಡುತ್ತದೆ ಎನ್ನುವುದನ್ನು ಅವರು ಮೊದಲೇ ಅರಿತು, ಅದಕ್ಕಾಗಿ ಪೂರ್ವ ತಯಾರಿಯಲ್ಲಿ ತೊಡಗುತ್ತಾರೆ.

ಪ್ರಪಂಚದ ಬಹುತೇಕ ಭಾಗಗಳಲ್ಲಿ ಜನರು ಬುದ್ಧರಿಗೆ ಗೌರವ ತೋರುವುದಿಲ್ಲ. ಏಕೆಂದರೆ ಬುದ್ಧರ ಬಗ್ಗೆ ಮತ್ತು ಅವರ ಬೋಧನೆಗಳ ಬಗ್ಗೆ ಜನರಿಗೆ ಏನೂ ತಿಳಿದಿಲ್ಲ. ಆದ್ದರಿಂದ ಧಮ್ಮವು ಹೇಗೆ ಹರಡಲು ಸಾಧ್ಯ ಎಂದು ಆಶ್ಚರ್ಯಚಕಿತರಾದರು. ಆಗ ಯಾವ ದೇಶಗಳಲ್ಲಿ ಬುದ್ಧರ ಮೇಲೆ ಜನರಲ್ಲಿ ಭಕ್ತಿಭಾವ ಇದೆಯೋ ಅಲ್ಲಿ ಭಿಕ್ಷುಗಳಿಂದ ಧರ್ಮ ಕಲಿಸುವುದು ಸಾಧ್ಯವಿದೆ. ಹಾಗಿಲ್ಲದ ದೇಶಗಳಲ್ಲಿ ಸಾಮಾನ್ಯ ಗೃಹಸ್ಥರೇ ಧರ್ಮ ಕಲಿಸಬೇಕಾಗುತ್ತದೆ ಎನ್ನುವ ನಿರ್ಧಾರಕ್ಕೆ ಅವರು ಬರುತ್ತಾರೆ. ಅಲ್ಲಿಯವರೆಗೆ ಧರ್ಮಬೋಧನೆಯನ್ನು ಅದರಲ್ಲೂ ವಿಶೇಷವಾಗಿ ಪಟಿಪತ್ತಿಯನ್ನು ಕೇವಲ ಭಿಕ್ಷುಗಳು ಮಾತ್ರ ಕಲಿಯುತ್ತಿದ್ದರು. ಲೇಡಿ ಸಯಾದೋ ಅವರು ಸಾಮಾನ್ಯ ಜನರೂ ಸಹ ಈ ವಿದ್ಯೆಯನ್ನು ಕಲಿಯುವಂತಾಗಲಿ. ಸಾಮಾನ್ಯ ಗೃಹಸ್ಥರೂ ಸಹ ಧರ್ಮದಲ್ಲಿ ಪ್ರತಿಷ್ಠಾಪಿತರಾಗಿ ಇತರರಿಗೂ ಸೇವೆ ಸಲ್ಲಿಸುವಂತಾಗಲಿ ಎಂದು ಅವರಿಗಾಗಿ ಧರ್ಮದ ಹೆಬ್ಬಾಗಿಲನ್ನು ತೆರೆಯುತ್ತಾರೆ. ಇದೊಂದು ಅತ್ಯಂತ ಫಲಪ್ರದವಾದ ಐತಿಹಾಸಿಕ ನಿರ್ಧಾರ.

ಅವರು ಸಯಾಥೇಜಿ ಎಂಬ ಹೆಸರಿನ ಒಬ್ಬ ಅದ್ಭುತ ಗೃಹಸ್ಥ ಆಚಾರ್ಯರನ್ನು ತರಬೇತುಗೊಳಿಸುತ್ತಾರೆ. ನಾವು ಅವರನ್ನೂ ನೆನಪಸಿಕೊಂಡು ನಮ್ಮ ಗೌರವವನ್ನು ಸಲ್ಲಿಸೋಣ. ಹೇಗೆ ಒಬ್ಬ ಗೃಹಸ್ಥ ಆಚಾರ್ಯ ತನ್ನ ಜೀವನ ನಡೆಸಬೇಕು ಮತ್ತು ಹೇಗೆ ಪ್ರೀತಿ ಅನುಕಂಪದಿಂದ ಇತರರ ಸೇವೆ ಮಾಡಬೇಕು ಎನ್ನುವುದಕ್ಕೆ ಅವರ ಜೀವನ ಒಂದು ಜ್ವಲಂತ ಉದಾಹರಣೆಯಾಗಿದೆ. ಹೊರಜಗತ್ತಿಗೆ ಗೃಹಸ್ಥರಾಗಿದ್ದರೂ ಅವರು ಓರ್ವ ಭಿಕ್ಷುವಿನಂತೆ ಪರಿಶುದ್ಧವಾದ ಜೀವನ ನಡೆಸಿದರು. ಮುಂಬರುವ ಅನೇಕ ಪೀಳಿಗೆಯ ಜನರು ಅವರ ಬಗ್ಗೆ ತಿಳಿದುಕೊಂಡು ಪ್ರೇರಣೆ ಪಡೆಯುತ್ತಾರೆ. ನಾವೆಲ್ಲರೂ ಸಯಾಥೇಜಿಯುವರಲ್ಲಿ ಆಳವಾದ ಕೃತಜ್ಞತೆಯನ್ನು ಹೊಂದಿದ್ದೇವೆ.

ನಂತರ ಬರುವವರೇ ಧರ್ಮದ ಆಕಾಶಗಂಗೆಯಲ್ಲಿ ಉಜ್ವಲವಾದ ನಕ್ಷತ್ರದಂತೆ ಹೊಳೆಯುವ, ನನ್ನ ಧರ್ಮಪಿತರಾದ ಸಯಾಜಿ ಉ ಬಾ

ಖಿನ್‌ರವರು ಸಂಕಷ್ಟದಲ್ಲಿರುವ ಮಾನವಕುಲದ ಬಗ್ಗೆ ಅವರಲ್ಲಿ ಅದೆಂತಹ ಪ್ರೀತಿ ಮತ್ತು ಅನುಕಂಪ! ಧರ್ಮವು ಪ್ರಪಂಚದಾದ್ಯಂತ ಪ್ರಸರಿಸಬೇಕೆಂಬ ಅಗಾಧವಾದ ಧರ್ಮಾಭಿಲಾಷೆ ಹೊಂದಿದ್ದರು. ಧಮ್ಮ ಮತ್ತೊಮ್ಮೆ ಭಾರತಕ್ಕೆ ಮರಳಿ, ಅಲ್ಲಿ ಪ್ರತಿಷ್ಠಾಪಿತವಾಗಿ, ನಂತರ ಎಲ್ಲರ ಸೇವೆಗಾಗಿ ಪ್ರಪಂಚದಾದ್ಯಂತ ಹರಡುತ್ತದೆ ಎನ್ನುವುದರ ಬಗ್ಗೆ ಅವರಿಗೆ ಸಂಪೂರ್ಣ ವಿಶ್ವಾಸವಿತ್ತು. ಸ್ವತಃ ತಾವೇ ಭಾರತಕ್ಕೆ ಭೇಟಿ ನೀಡಲು ಉತ್ಸುಕರಾಗಿದ್ದರು. ಆದರೆ ಕೆಲವು ಕಾರಣಗಳಿಂದ ಅದು ಅವರಿಗೆ ಸಾಧ್ಯವಾಗಲಿಲ್ಲ. ನಂತರದ ದಿನಗಳಲ್ಲಿ, ಬರ್ಮಾದ ನಾಗರೀಕನಾಗಿದ್ದರೂ ಕೆಲವು ಪರಿಸ್ಥಿತಿಗಳಿಂದಾಗಿ ನನಗೆ ಭಾರತಕ್ಕೆ ಪ್ರಯಾಣಿಸಲು ಪಾಸ್‌ಪೋರ್ಟ್ ದೊರೆಯಿತು. ಆಗ ಅವರು "ಈಗ ನನ್ನ ಪ್ರತಿನಿಧಿಯಾಗಿ ನೀನು ಹೋಗುತ್ತಿರುವೆ ಮತ್ತು ನೀನು ನನ್ನ ಕನಸನ್ನು, ನನ್ನ ಧ್ಯೇಯವನ್ನು, ನನ್ನ ಆಕಾಂಕ್ಷೆಯನ್ನು ಪೂರ್ತಿಗೊಳಿಸುತ್ತೀಯ" ಎಂದು ಅತ್ಯಂತ ಸಂತೋಷದಿಂದ ಹೇಳಿದರು. ಆದರೆ ನನಗಿನ್ನೂ ಅನುಮಾನ. ಏಕೆಂದರೆ ನನಗೆ ನನ್ನ ಇತಿಮಿತಿಗಳ ಅರಿವಿತ್ತು. ಅನುಮಾನಿಸುತ್ತಾ ಅವರಿಗೆ, "ಬುದ್ಧ ಮತ್ತು ಅವರ ಬೋಧನೆಗಳ ಬಗ್ಗೆ ಅಷ್ಟೊಂದು ಆಳವಾದ ತಪ್ಪು ತಿಳುವಳಿಕೆ ಬೇರೂರಿರುವಂತಹ ದೇಶದಲ್ಲಿ ನಾನು ಹೇಗೆ ಧರ್ಮ ಕಲಿಸಿಕೊಡುವಲ್ಲಿ ಯಶಸ್ವಿಯಾಗಲು ಸಾಧ್ಯ?" ಎಂದು ಕೇಳಿದೆ.

ಆಗ ಅವರು, "ನೀನದರ ಬಗ್ಗೆ ಯಾವ ಚಿಂತೆಯನ್ನೂ ಮಾಡಬೇಕಾಗಿಲ್ಲ. ಏಕೆಂದರೆ ಅಲ್ಲಿ ಹೋಗುತ್ತಿರುವುದು ಧಮ್ಮ (ಧರ್ಮ) ಮತ್ತು ನಿನ್ನ ಮುಖಾಂತರ ನಾನು ಹೋಗುತ್ತಿದ್ದೇನೆ. ನೀನು ಯಶಸ್ವಿಯಾಗುವೆ. ಚಿಂತಿಸಬೇಡ" ಎಂದು ಹೇಳುತ್ತಾ ನನ್ನನ್ನು ಪ್ರೋತ್ಸಾಹಿಸಿದರು.

ನಾನು ಬರ್ಮಾದಿಂದ ಹೊರಟಾಗ, ನನ್ನೆದುರು ಅಂಧಕಾರವೇ ಕವಿದಿತ್ತು. "ಯಾವ ವಿಶ್ವಾಸದಿಂದ ಜನರು ನನ್ನ ಜೊತೆ ಹತ್ತು ದಿನ ಕಳೆಯುವುದಕ್ಕಾಗಿ ಒಪ್ಪುವರು? ಯಾರು ಈ ಶಿಬಿರಗಳ ವ್ಯವಸ್ಥೆ ಮಾಡುವರು?" ಎಂದೆಲ್ಲಾ ಚಿಂತಿಸುತ್ತಿದ್ದೆ.

ಆದರೆ ಸಯಾಜಿ ಉ ಬಾ ಖಿನ್ ಅವರ ಆಶೀರ್ವಾದದಿಂದ ಮೊದಲನೆಯ ಹತ್ತು ದಿನದ ಶಿಬಿರವು ನಾನು ಭಾರತಕ್ಕೆ ಬಂದ ಕೇವಲ ಒಂದು ತಿಂಗಳೊಳಗಾಗಿಯೇ ನೆರವೇರಿತು. ಮತ್ತು ಅಲ್ಲಿಂದ ಧರ್ಮಗಂಗೆಯು ಮತ್ತೊಮ್ಮೆ ದೇಶದಾದ್ಯಂತ ಹರಿಯಲಾರಂಭಿಸಿತು. ಇದು ನಂಬಲಸಾಧ್ಯವೇ ಸರಿ.

ಆ ಸಮಯದಲ್ಲಿ ಸಾವಿರಾರು ಜನ ಪ್ರಪಂಚದ ಬೇರೆ ಬೇರೆ ಕಡೆಗಳಿಂದ ಒಂದಲ್ಲ ಒಂದು ಕಾರಣದಿಂದ ಭಾರತಕ್ಕೆ ಆಗಮಿಸಿ ಶಿಬಿರದಲ್ಲಿ ಭಾಗವಹಿಸತೊಡಗಿದರು. ಈ ಸಾಧಕರು ತಮ್ಮ ದೇಶಗಳಿಗೂ ಭೇಟಿ ನೀಡಿ ಧಮ್ಮ ಕಲಿಸಬೇಕೆಂದು ನನಗೆ ಒತ್ತಾಯಿಸತೊಡಗಿದರು. ಏಕೆಂದರೆ, ಅವರ ಅನೇಕ ಬಂಧು–ಮಿತ್ರರಿಗೆ ಭಾರತಕ್ಕೆ ಭೇಟಿ ನೀಡಿ ಶಿಬಿರದಲ್ಲಿ ಭಾಗವಹಿಸುವುದು ಸಾಧ್ಯವಾಗುತ್ತಿರಲಿಲ್ಲ. ಆದರೆ ನನಗೆ ಅದು ಅಸಾಧ್ಯವಾಗಿತ್ತು. ಏಕೆಂದರೆ ನನ್ನ ಪಾಸ್‌ಪೋರ್ಟ್ ಕೇವಲ ಭಾರತ ದೇಶಕ್ಕೆ ಭೇಟಿ ನೀಡುವ ಸಲುವಾಗಿ ಮಾತ್ರ ಇತ್ತು. ಆಗ ನನಗೆ ಸಯಾಜಿಯವರ ಮತ್ತು ಧರ್ಮವು ಪ್ರಪಂಚದಾದ್ಯಂತ ಪ್ರಸರಿಸಬೇಕೆನ್ನುವ ಅವರ ಅದಮ್ಯ ಆಕಾಂಕ್ಷೆಯ ನೆನಪಾಯಿತು. ಆಗ ನಾನು ಒಂದು ದೃಢನಿರ್ಧಾರ ಮಾಡಿದೆ. ಅದೇನೆಂದರೆ, ಒಂದೋ ಹತ್ತು ವರ್ಷದ ಒಳಗಾಗಿ ನನಗೆ ನನ್ನ ಮಾತೃದೇಶವಾದ ಬರ್ಮಾದಿಂದ ವಿವಿಧ ದೇಶಗಳಿಗೆ ಭೇಟಿ ನೀಡಲು ಅನುಮತಿ ದೊರೆಯಬೇಕು. ಇಲ್ಲದೇ ಹೋದರೆ ನಾನು ಭಾರತದ ಪೌರತ್ವ ಪಡೆದು ಹೊರದೇಶಗಳಲ್ಲಿ ಧರ್ಮಬೋಧನೆ ಮಾಡುತ್ತೇನೆ. ಹತ್ತು ವರ್ಷದ ಗಡುವು ಹತ್ತಿರವಾಗುತ್ತಿತ್ತು. ಆದರೂ ಬರ್ಮಾ ಸರ್ಕಾರ ನನಗೆ ಅನುಮತಿ ನೀಡಲಿಲ್ಲ. ಆದರೂ ನಾನು ಕಾಯುತ್ತಲೇ ಉಳಿದೆ. ಕೊನೆಗೆ ಗುಡುವು ತೀರಾ ಹತ್ತಿರವಾದಾಗ, ನಾನು ಭಾರತದ ನಾಗರೀಕನಾಗಲು ಅರ್ಜಿ ಸಲ್ಲಿಸಿದೆ. ಪೌರತ್ವ ದೊರಕಲು ಸಾಕಷ್ಟು ಸಮಯ ಬೇಕಾಗಬಹುದು ಮತ್ತು ಅದಾದ ನಂತರ ಪಾಸ್‌ಪೋರ್ಟ್ ಪಡೆಯಲು ಇನ್ನೂ ಹೆಚ್ಚಿನ ಸಮಯ ಬೇಕಾಗುತ್ತದೆ ಎನ್ನುವ ಅರಿವು ನನಗಿತ್ತು. ಆದರೆ ಧಮ್ಮದ ಕಾರ್ಯವೈಖರಿ ನೋಡಿ! ಹತ್ತು ವರ್ಷದ ಗಡುವು ಮುಗಿಯಲು ಸರಿಯಾಗಿ ಮೂರು ದಿನಗಳ ಮೊದಲು ನನಗೆ ಭಾರತದ ಪೌರತ್ವ ದೊರೆಯಿತು. ನಾನು ಭಾರತಕ್ಕೆ ಆಗಮಿಸಿದ ದಿನದಿಂದ ಸರಿಯಾಗಿ ಹತ್ತು ವರ್ಷಗಳು ಪೂರ್ತಿಯಾದ ದಿನವೇ ನನಗೆ ಪಾಸ್‌ಪೋರ್ಟ್ ನೀಡಲಾಯಿತು.

ನಾನು ನಿರ್ವಹಿಸಿದ ಮೊದಲ ಶಿಬಿರದಿಂದಲೂ, ಆನಾಪಾನ ಅಥವಾ ವಿಪಶ್ಯನ ಕಲಿಸಿಕೊಡುವಾಗ ನಾನು ಸಮ್ಮಾಸಂಬುದ್ಧರಿಗೆ ಗೌರವ ಸಲ್ಲಿಸುತ್ತ ಆರಂಭಿಸುತ್ತೇನೆ ಮತ್ತು ಅದರ ನಂತರ ಹೀಗೆ ಹೇಳುತ್ತೇನೆ.

ಗುರುವರ, ತೇರಿ ಓರ ಸೇ,

ದೇವೂ ಧರಮ ಕಾ ದಾನ

ಗುರುವರ್ಯ, ನಿಮ್ಮ ಪರವಾಗಿ ನಾನು ಧರ್ಮದ ಕೊಡುಗೆಯನ್ನು ನೀಡುತ್ತಿದ್ದೇನೆ. ನಾನು ನಿಮ್ಮ ಪ್ರತಿನಿಧಿ ಮಾತ್ರ.

ಧರ್ಮವನ್ನು ಪ್ರಪಂಚದಾದ್ಯಂತ ಹರಡಿದ್ದಕ್ಕಾಗಿ ಜನರು ನನ್ನನ್ನು ಅಭಿನಂದಿಸಿದಾಗ ನನಗೆ ಬಹಳ ಮುಜುಗರ ಉಂಟಾಗುತ್ತದೆ. ನಾನು ಧರ್ಮವನ್ನು ನೀಡುತ್ತಿದ್ದೇನೆ ಎನ್ನುವ ತಪ್ಪು ಭಾವನೆ ಜನರಲ್ಲಿ ಇರಬಾರದು. ಅದು ನಾನಲ್ಲ, ನನ್ನ ಆಚಾರ್ಯರು ಧಮ್ಮವನ್ನು ಪ್ರಪಂಚಕ್ಕೆ ನೀಡುತ್ತಿರುವುದು. ನಾನು ಕೇವಲ ಅವರ ಪ್ರತಿನಿಧಿ. ಈ ಭಾವನೆ ನನ್ನಲ್ಲಿ ಅಹಂಭಾವವನ್ನು ಬೆಳೆಯಲು ಬಿಡುವುದಿಲ್ಲ.

ನನ್ನಿಂದ ತರಬೇತಿ ಹೊಂದಿದ ಎಲ್ಲ ಆಚಾರ್ಯರುಗಳೂ ಇತರರಿಗೆ ಧರ್ಮವನ್ನು ನೀಡುವಾಗ ಇದೇ ಭಾವನೆಯನ್ನು ಇರಿಸಿಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಧರ್ಮವನ್ನು ನೀಡುತ್ತಿರುವುದು ಸಯಾಜಿ ಉ ಬಾ ಖಿನ್. ನೀವು ಕೇವಲ ಅವರ ಪ್ರತಿನಿಧಿಗಳು ಮಾತ್ರ.

ಆದ್ದರಿಂದ ನಮ್ಮೆಲ್ಲರ ಧಮ್ಮ ತಂದೆಯಾದ ಆ ಮಹಾನ್ ಗೃಹಸ್ಥ ಸಂತ ಸಯಾಜಿ ಉ ಬಾ ಖಿನ್ ಅವರಿಗೆ ಗೌರವ ಅರ್ಪಿಸಲು ನಾವೆಲ್ಲರೂ ಇಲ್ಲಿ ನೆರೆದಿರುವ ಈ ಸಂದರ್ಭದಲ್ಲಿ ಅವರ ಧ್ಯೇಯವನ್ನು ಈಡೇರಿಸಲಿಕ್ಕಾಗಿ ಸೇವೆ ಸಲ್ಲಿಸುವ ನಮ್ಮ ದೃಢನಿಶ್ಚಯವನ್ನು ಇನ್ನೂ ಬಲವಾಗಿಸೋಣ. ಅದರಿಂದ ಜಗತ್ತಿನಾದ್ಯಂತ ದುಃಖದಲ್ಲಿರುವ ಜನರಿಗೆ ಅವರು ಗೌತಮ ಬುದ್ಧರಿಂದ ಪಡೆದ ಬೋಧನೆಗಳ ಲಾಭ ದೊರೆಯಲಿ.

ಸಯಾಜಿ ಉ ಬಾ ಖಿನ್ ಅವರಿಗೆ ನಿಜವಾದ ಗೌರವ ಸಲ್ಲಿಸುವ ಏಕಮಾತ್ರ ವಿಧಾನವೆಂದರೆ ಶುದ್ಧಧರ್ಮದ ಜೀವನ ನಡೆಸುತ್ತಾ ಇತರರಿಗೆ ಮಾದರಿಯಾಗಿ ಬದುಕುವುದು.

"ನಾನು ಸಯಾಜಿ ಉ ಬಾ ಖಿನ್ ಅವರ ಪ್ರತಿನಿಧಿ ಮಾತ್ರ" ಎನ್ನುವ ಅರಿವಿನೊಂದಿಗೆ ಅಹಂಭಾವವಿಲ್ಲದೆ ಯಾವಾಗಲೂ ಸೇವೆ ಸಲ್ಲಿಸುತ್ತಲೇ ಇರಿ.

ಆ ಮಹಾನ್ ಆಚಾರ್ಯ ಸಯಾಜಿ ಉ ಬಾ ಖಿನ್ ಅವರ ಧರ್ಮಾಕಾಂಕ್ಷೆ, ಧರ್ಮ–ಧ್ಯೇಯ ನೆರವೇರಲಿ. ಈ ಅದ್ಭುತವಾದ ಧರ್ಮದ ಲಾಭ ಜಗತ್ತಿನಾದ್ಯಂತ ಹೆಚ್ಚು ಹೆಚ್ಚು ಜನರಿಗೆ ದೊರೆಯಲಿ. ಎಲ್ಲರೂ ತಮ್ಮ ತಮ್ಮ ದುಃಖದಿಂದ ಹೊರಬರುವಂತಾಗಲಿ.

ಪ್ರತಿಯೊಬ್ಬರೂ ಸಂತೋಷದಿಂದಿರಲಿ, ಶಾಂತಿಯಿಂದಿರಲಿ, ಮುಕ್ತರಾಗಲಿ.

ಭವತು ಸಬ್ಬ ಮಂಗಳಂ–ಎಲ್ಲರಿಗೂ ಮಂಗಳವಾಗಲಿ.

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಕೆ.ಬಿ. ಚಿಕ್ಕನಾರಾಯಣಪ್ಪಾಜಿಯವರು ದಿನಾಂಕ 26–09–2025ರಂದು ತಮ್ಮ ಮಾಗಿದ 99 ವರ್ಷ ವಯಸ್ಸಿನಲ್ಲಿ ಶಾಂತಿಯುತವಾಗಿ ಶರೀರ ತ್ಯಾಗ ಮಾಡಿದರು. 1988ರಲ್ಲಿ ಅವರು ತಮ್ಮ 63ನೇ ವಯಸ್ಸಿನಲ್ಲಿ ಹತ್ತು ದಿನದ ಶಿಬಿರದಲ್ಲಿ ಭಾಗವಹಿಸಿ ವಿಪಶ್ಯನ ಧ್ಯಾನವನ್ನು ಕಲಿತರು. ಡಾ॥ ಬಿ.ಜಿ. ಸಾವ್ಲಾಜಿಯವರು ಈ ಶಿಬಿರ ನಿರ್ವಹಿಸಿದ್ದರು. ಶಿಬಿರ ಮುಗಿದ ಮೇಲೆ ತುಂಬು ಹೃದಯದಿಂದ ತಮ್ಮ ಜೀವನ ಪರ್ಯಂತ ಧರ್ಮ ಸೇವೆಯಲ್ಲಿ ತೊಡಗಿಸಿಕೊಂಡರು ಮತ್ತು ಮಾದರಿ ಧಾರ್ಮಿಕ ಜೀವನ ನಡೆಸಿದರು. 1994ರಲ್ಲಿ ಇವರನ್ನು ವಿಪಶ್ಯನ ಧ್ಯಾನದ ಸಹಾಯಕ ಆಚಾರ್ಯರನ್ನಾಗಿ ನೇಮಕ ಮಾಡಲಾಯಿತು ಮತ್ತು 2005ರಲ್ಲಿ ಪೂರ್ಣ ಪ್ರಮಾಣದ ಆಚಾರ್ಯರನ್ನಾಗಿ ಮಾಡಲಾಯಿತು. 2005 ರಿಂದ 2012ರವರೆಗೆ ಬೆಂಗಳೂರಿನ ಧಮ್ಮ ಪಫುಲ್ಲ ಧ್ಯಾನ ಕೇಂದ್ರದ ಆಚಾರ್ಯರಾಗಿ ಸೇವೆ ಸಲ್ಲಿಸಿದರು.

ಕನ್ನಡದ ಜನರಿಗೆ ಉಪಯೋಗವಾಗಲೆಂದು ಗೋಯಂಕಾಜಿಯವರ ಧ್ಯಾನದ ಸೂಚನೆಗಳನ್ನು ಮತ್ತು ಪ್ರವಚನಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು. ಇದರಿಂದ ಕನ್ನಡ ಮಾತ್ರ ತಿಳಿದಿದ್ದ ಕನ್ನಡಿಗರು ವಿಪಶ್ಯನ ಧ್ಯಾನ ಕಲಿಯಲು ಸಹಾಯಕವಾಯಿತು. ಜೊತೆಗೆ ಗೋಯಂಕಾಜಿಯವರ ಅನೇಕ ಪುಸ್ತಕಗಳನ್ನು, ಲೇಖನಗಳನ್ನು ಭಾಷಾಂತರ ಮಾಡಿದ್ದಾರೆ. 'ವಿಪಶ್ಯನ ವಾರ್ತೆ' ಮಾಸಪತ್ರಿಕೆಯನ್ನು 2014ರಲ್ಲಿ ಅವರ

**RNI. No. : KARKAN/2015/68727. Postal Regn. No.: RNP/KA/BGS/2253/2023-25**
**Published On 10th & Posted On 26th of December, 2025 Posted At : Bengaluru PSO, B'luru 26. Price(Annual)Rs.30.**

ಅಮೃತ ಹಸ್ತದಿಂದ ಬಿಡುಗಡೆ ಮಾಡಿದರು. ಅಲ್ಲಿಂದ ಅವರು ತಮ್ಮ 99 ವರ್ಷ ಪೂರೈಸಿದ ಮೇಲೂ 'ವಿಪಶ್ಯನ ವಾರ್ತೆ' ಮಾಸಪತ್ರಿಕೆಗೆ ಇಂಗ್ಲಿಷ್‌ನಲ್ಲಿದ್ದ ಗೋಯಂಕಾಜಿ ಯವರ ಲೇಖನಗಳನ್ನು ಅನುವಾದಿಸಿ ಪ್ರಕಟಣೆಗಾಗಿ ಕಳುಹಿಸಿದ್ದಾರೆ. 99 ವರ್ಷ ವಯಸ್ಸು ದಾಟಿದ ಮೇಲೂ ಅವರ ಕೈಬರಹ ಬದಲಾಗಿರಲಿಲ್ಲ ಮತ್ತು ಅವರ ಗ್ರಹಿಕೆಯಲ್ಲಿ ವ್ಯತ್ಯಾಸವಾಗಿರಲಿಲ್ಲ.

ದಣಿವರಿಯದೆ ಶಿಬಿರಗಳನ್ನು ನಡೆಸಿದ್ದಾರೆ. ಲೆಕ್ಕವಿಲ್ಲದಷ್ಟು ವಿಪಶ್ಯನ ಧ್ಯಾನದ ಪರಿಚಯಾತ್ಮಕ ಉಪನ್ಯಾಸಗಳನ್ನು ನೀಡಿದ್ದಾರೆ.

ಧಮ್ಮ ಪ್ರಫುಲ್ಲಾ ಧ್ಯಾನ ಕೇಂದ್ರವನ್ನು ನಿರ್ಮಾಣ ಮಾಡುವಾಗ ಧ್ಯಾನ ಮಂದಿರ ಮತ್ತು ಆಚಾರ್ಯರ ನಿವಾಸಗಳ ಕಟ್ಟಡದ ಉಸ್ತುವಾರಿಯನ್ನು ನೋಡಿಕೊಂಡಿದ್ದಾರೆ.

ತಮ್ಮ ಮಾತೃಭಾಷೆ ಕನ್ನಡದ ಜೊತೆಗೆ ಇಂಗ್ಲಿಷ್, ಹಿಂದಿ, ತೆಲುಗು ಮತ್ತು ತಮಿಳು ಭಾಷೆಗಳನ್ನೂ ಬಲ್ಲವರಾಗಿದ್ದರು. ಹಾಗಾಗಿ ಆಂಧ್ರ, ತಮಿಳುನಾಡು ಮತ್ತು ಉತ್ತರ ಭಾರತದಲ್ಲೂ ಅವರು ಧ್ಯಾನ ಶಿಬಿರಗಳನ್ನು ನಿರ್ವಹಿಸಲು ಸಾಧ್ಯವಾಯಿತು. ಜೈಲುಗಳಲ್ಲೂ ಶಿಬಿರಗಳನ್ನು ನಡೆಸಿದ್ದಾರೆ.

ಧ್ಯಾನ ಕೇಂದ್ರಗಳಲ್ಲಿ ಅವರು ಪರಿಚಯಿಸಿದ ರಾಗಿ ಮಾಲ್ಟ್ ಇಂದಿಗೂ ಬಹಳ ಜನಪ್ರಿಯವಾಗಿದೆ. ಧ್ಯಾನ ಸಾಧಕರು ಅದನ್ನು ತಮ್ಮ ಮನೆಗಳಲ್ಲಿ ಉಪಯೋಗಿಸಲು ಅದಕ್ಕೆ ಬಳಸುವ ದಿನಸಿಗಳು ಮತ್ತು ಮಾಡುವ ವಿಧಾನವನ್ನು ಕೇಳಿ ತಿಳಿದುಕೊಂಡು ಹೋಗುತ್ತಾರೆ.

ಕರ್ನಾಟಕದ ಹಿರಿಯ ಆಚಾರ್ಯರುಗಳಾದ ಶ್ರೀ ಚೋತ್‌ಮಲ್ ಗೋಯಂಕ, ಶ್ರೀ ಎಲ್. ಶಿವಪ್ಪ, ಶ್ರೀ ನಿಷ್ಕಾಮ ಚೈತನ್ಯ ಅವರೊಡನೆ ಸಮರಸವಾದ ಸ್ನೇಹ ಸಂಬಂಧವನ್ನು ಹೊಂದಿದ್ದರು.

ಸರಳ ವ್ಯಕ್ತಿತ್ವದ ಚಿಕ್ಕ ನಾರಾಯಣಪ್ಪಾಜಿಯವರು ಯಾವಾಗಲೂ ಶಿಸ್ತು, ಸಂಯಮ ಮತ್ತು ಸಮತೆಯಿಂದಿರುತ್ತಿದ್ದರು. ಇತರರ ಬಗ್ಗೆ ಶಾಂತಿ, ಸಹನೆ, ಪ್ರೀತಿ ಮತ್ತು ಕರುಣೆಯಿಂದಿದ್ದರು.

ಕರ್ನಾಟಕದ ಜನರು ಎಂದೆಂದಿಗೂ ಅವರಿಗೆ ಚಿರಋಣಿಗಳಾಗಿದ್ದಾರೆ. ಅವರ ಧರ್ಮ ಜೀವನವು ನಮಗೆಲ್ಲ ಸ್ಫೂರ್ತಿಯಾಗಿದೆ. ಅವರ ಧರ್ಮ ಸೇವೆಯು ನಮಗೆಲ್ಲಾ ಮಾರ್ಗದರ್ಶಿಯಾಗಿದೆ.

ಧರ್ಮಸೇವೆಯಿಂದ ಅವರು ಗಳಿಸಿದ ಪುಣ್ಯವು ನಿಬ್ಬಾಣದ ಕಡೆಗಿನ ಅವರ ಪ್ರಯಾಣವನ್ನು ಸುಗಮಗೊಳಿಸಲಿ.

ಸಾಧು, ಸಾಧು, ಸಾಧು.

******

**ಧಮ್ಮ ಪಫುಲ್ಲಾ, ಬೆಂಗಳೂರು**

**2026** : 20 ದಿನಗಳ ದೀರ್ಘ ಶಿಬಿರ ಜನವರಿ 16 ರಿಂದ ಫೆಬ್ರವರಿ 6. 30 ದಿನಗಳ ಶಿಬಿರ ಜನವರಿ 16 ರಿಂದ ಫೆಬ್ರವರಿ 16.

**ಹತ್ತು ದಿನದ ಶಿಬಿರಗಳು** : ಫೆಬ್ರವರಿ 19–ಮಾರ್ಚ್ 2, ಮಾರ್ಚ್ 5–16, ಏಪ್ರಿಲ್ 8–19, 22–3 ಮೇ– 6–17, ಜೂನ್ 3–14, 17–28, ಜುಲೈ 1–12, 15–26, 29–9 ಆಗಸ್ಟ್ 12–23.

**ಸತಿಪಟ್ಠಾನ ಶಿಬಿರ** : ಮಾರ್ಚ್ 23–31

**ಮೂರು ದಿನದ ಶಿಬಿರಗಳು** : ಏಪ್ರಿಲ್ 2–5, ಆಗಸ್ಟ್ 27–30.

**ಹದಿಹರೆಯದವರ ಶಿಬಿರ** : ಮೇ 20–28.

**ವಿಳಾಸ** : ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್)ನಗರ ಸಾರಿಗೆ ಬಸ್ ಸಂಖ್ಯೆ: 256,258,258ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 63605 87970 **ಇ–ಮೇಲ್** : info @ paphulla. dhamma. org;website; www. vridhamma. org.

**ಧಮ್ಮ ನಗರಿ, ದಾವಣಗೆರೆ.**

**2026 ಹತ್ತು ದಿನದ ಶಿಬಿರಗಳು** : ಜನವರಿ 7–18, ಜನವರಿ 18–ಫೆಬ್ರವರಿ 8, ಫೆಬ್ರವರಿ 18–ಮಾರ್ಚ್ 1, ಮಾರ್ಚ್ 25–ಏಪ್ರಿಲ್5, 15–26 ಮೂರು ದಿನದ ಶಿಬಿರ : ಮಾರ್ಚ್ 19–22.

ವೆಬ್‌ಸೈಟ್ : https://www. dhamma. org/en/schedules/schnagari

**ಗೂಗಲ್ ಮ್ಯಾಪ್** : https://maps.app.goo.gl/CZoHPKWSeeUNSJKZ6

Contact Numbers : 90087 33008, 94485 88789, 87226 05694

**ಧಮ್ಮ ನಗರಿ, ಉಡುಪಿ ಜಿಲ್ಲೆ.**

**2026– ಹತ್ತು ದಿನದ ಶಿಬಿರಗಳು** : ಜನವರಿ 14–25, ಫೆಬ್ರವರಿ 11–22, ಮಾರ್ಚ್ 4–15, ಏಪ್ರಿಲ್ 8–19, ಮೇ 6–17, ಜೂನ್ 3–14, ಜುಲೈ 1–12, ಆಗಸ್ಟ್ 12–23. ಧಮ್ಮವನ, ಮೈಸೂರು

**2026– ಹತ್ತು ದಿನದ ಶಿಬಿರಗಳು** : ಫೆಬ್ರವರಿ 18–ಮಾರ್ಚ್ 1, 4–15, ಏಪ್ರಿಲ್ 15–26, ಮೇ 6–17, ಜೂನ್ 10–21, ಜುಲೈ 28–ಆಗಸ್ಟ್ 8, 19–30, ಸೆಪ್ಟಂಬರ್ 16–27,

ಮೂರು ದಿನಗಳ ಶಿಬಿರ : ಜನವರಿ 23–26, ಜೂನ್25–28, ಡಿಸೆಂಬರ್ 24–27.

ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಲು: www.dhamma. org/schedules/schvana.

ಹೆಚ್ಚಿನ ಮಾಹಿತಿಗೆ : 88805 19658

**ಧಮ್ಮ ಸುಖಾಲಯ, ಬೆಂಗಳೂರು**

10 ದಿನದ ಶಿಬಿರಗಳು–2025:

ಡಿಸೆಂಬರ್ 24–4 ಜನವರಿ ನಿರಂತರವಾಗಿ ಒಂದು ದಿನದ ಶಿಬಿರಗಳು ನಡೆಯುತ್ತವೆ.

ವಿಳಾಸ : ಅರೆಹಳ್ಳಿ, ಹೊಸಕೋಟೆ ತಾಲೂಕು, ಬೆಂಗಳೂರು. website : sukhalaya.dhamma.org

ಫೋನ್ : 099004–52939

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ.
**ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, # 7/1, 3ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ, ಮಹಿಳಾ ಮಂಡಳಿ ಶಾಲೆ ಎದುರು, ಬೆಂಗಳೂರು 560 004. **ಗೌರವ ಸಂಪಾದಕರು: ಜಿ.ಟಿ. ಗೋವಿಂದಪ್ಪ**

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:

**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
# 7/1, 3ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ,
ಮಹಿಳಾ ಮಂಡಳಿ ಶಾಲೆ ಎದುರು, ಬೆಂಗಳೂರು 560 004.

ಗೆ,